**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ದಂಡಾಧಿಕಾರಿಗಳು,**
**ಹೆಗ್ಗಡದೇವನಕೋಟೆ.**

**O.S. No. 117/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಸಾವಿತ್ರಮ್ಮ |
| ಗಂಡನ ಹೆಸರು | : | ನಾಗರಾಜೇಗೌಡ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಸಿಂಗಮಾರನಹಳ್ಳಿ ಗ್ರಾಮ, ಹುಣಸೂರು ತಾ., ಮೈಸೂರು ಜಿಲ್ಲೆ. |

**ಸಾಕ್ಷಿಯನ್ನು ದಿನಾಂಕಃ 14.09.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಎಂ.ಜಿ.ಆರ್. ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆ ಬಾಬ್ತು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ನಾನು ದಿನಾಂಕಃ 23.09.2020 ರ ಕ್ರಯದ ಕರಾರು ಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಸದರಿ ದಾಖಲೆಯನ್ನು ಪರಿಶೀಲಿಸಿದಾಗ ಕ್ರಯದ ಮೌಲ್ಯ ರೂ. 5,00,000/- ಎಂದು ನಿಗದಿಪಡಿಸಿದ್ದು ಸದರಿ ಕರಾರು ಪತ್ರವನ್ನು ರೂ. 300/- ರ ಸ್ಟಾಂಪ್ ಪೇಪರ್ ಮೇಲೆ ಬರೆಯಲಾಗಿದ್ದು, ಸದರಿ ರೂ, 5,00,000/- ಸಂಬಂಧಿಸಿದಂತೆ ಕೊರತೆ ಮುದ್ರಾಂಕ ಶುಲ್ಕ ಮತ್ತು ದಂಡವನ್ನು ಪಾವತಿಸಬೇಕು. ಆದ್ದರಿಂದ ಕೊರತೆ ಮುದ್ರಾಂಕ ಶುಲ್ಕ ಮತ್ತು ದಂಡವನ್ನು ಪಾವತಿಸಿದ ನಂತರ ಈ ಮೇಲೆ ಹೇಳಿದ ಕರಾರು ಪತ್ರವನ್ನು ನಿಶಾನೆಯಾಗಿ ಪರಿಗಣಿಸಬೇಕಾಗುತ್ತದೆ.

02 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.-1 ಮತ್ತು ನಿ.ಪಿ.-2 ಎಂದು ಗುರುತಿಸಲಾಯಿತು.

01 ಮ್ಯುಟೇಷನ್ ರಿಜಿಸ್ಟರ್ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.-3 ಎಂದು ಗುರುತಿಸಲಾಯಿತು.

ದಿನಾಂಕಃ 02.03.2021 ರಂದು ಪ್ರತಿವಾದಿಗಳಿಗೆ ನೀಡಿದ ನೋಟೀಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.-4 ಎಂದು ಗುರುತಿಸಲಾಯಿತು.

04 ಅಂಚೆ ರಸೀದಿಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.-5 ರಿಂದ ನಿ.ಪಿ.-8 ಎಂದು ಗುರುತಿಸಲಾಯಿತು.

02 ಮತ್ತು 03 ನೇ ಪ್ರತಿವಾದಿಗಳಿಗೆ ಕಳುಹಿಸಿದ ನೋಟೀಸ್ ಊರಿನಲ್ಲಿ ಇರಲಿಲ್ಲ ಎಂಬ ಷರಾದೊಂದಿಗೆ ವಾಪಸ್ ಬಂದಿದ್ದು, ತೆರೆದ ನ್ಯಾಯಾಲಯದಲ್ಲಿ 02 ಅಂಚೆ ಲಕೋಟೆಗಳನ್ನು ತೆರೆದು ನೋಡಲಾಗಿ ಅವುಗಳಲ್ಲಿ ಲೀಗಲ್ ನೋಟೀಸಿನ ಪ್ರತಿಗಳು ಇರುತ್ತದೆ. ಆದ್ದರಿಂದ ಸದರಿ ಲೀಗಲ್ ನೋಟೀಸಿನ ಪ್ರತಿಗಳನ್ನು ಕ್ರಮವಾಗಿ ನಿ.ಪಿ.-9 ಮತ್ತು ನಿ.ಪಿ.-10 ಎಂದು, 02 ಅಂಚೆ ಲಕೋಟೆಗಳನ್ನು ಕ್ರಮವಾಗಿ ನಿ.ಪಿ.-11 ಮತ್ತು ನಿ.ಪಿ.-12 ಎಂದು ಗುರುತಿಸಲಾಯಿತು.

ಪ್ರತಿವಾದಿಗಳ ಪರ ವಕೀಲರು ನಾನು ಕಳುಹಿಸಿದ ನೋಟೀಸಿಗೆ ದಿನಾಂಕಃ 12.03.2021 ರಂದು ನೀಡಿದ ಪ್ರತ್ಯುತ್ತರ ನೋಟೀಸಿನ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.-13 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ವಾದಿ ಪರ ವಕೀಲರು ಮುಂದಿನ ಮುಖ್ಯ ವಿಚಾರಣೆಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**